# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | : 380(461) |
| ಸದಸ್ಯರ ಹೆಸರು | : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 19.02.2024. |
| ಉತ್ತರಿಸುವ ಸಚಿವರು | : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸರ್ಕಾರಿ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಬೇಡಿಕೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಕ್ಕಳ ಸಂಖ್ಯೆ ಸಾಕಷ್ಟು ಇರುವ ಕಡೆ ಇಂಗ್ಲೀಷ್ ಮಾಧ್ಯಮ ಹಾಗೂ ಪೂರ್ವ ಪ್ರಾಥಮಿಕ (ನರ್ಸರಿ) ತರಗತಿಗಳನ್ನು ಪ್ರಾರಂಭಿಸಲಾಗುತ್ತಿದೆಯೇ; ಈ ಶಾಲೆಗಳನ್ನು/ತರಗತಿಗಳನ್ನು ಪ್ರಾರಂಭಿಸಲು ಇರುವ ಮಾನದಂಡ/ಪ್ರಕ್ರಿಯೆಗಳೇನು/ ರಾಜ್ಯದ ಎಷ್ಟು ಸರ್ಕಾರಿ ಶಾಲೆಗಳಲ್ಲಿ ಎಷ್ಟು ತರಗತಿಯವರೆಗೆ ಇಂಗ್ಲೀಷ್ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ದ್ವಿಭಾಷಾ ವಿಭಾಗ<br><br>ರಾಜ್ಯದ ಸರ್ಕಾರಿ ಶಾಲೆಗಳಲ್ಲಿ ಆಂಗ್ಲ ಮಾಧ್ಯಮವನ್ನು ಪ್ರಾರಂಭಿಸಲು ಬೇಡಿಕೆ ಬಂದ ಹಿನ್ನೆಲೆಯಲ್ಲಿ ಸರ್ಕಾರವು 2019-20ನೇ ಸಾಲಿನಲ್ಲಿ 1001 ಕನ್ನಡ ಮಾಧ್ಯಮ ಶಾಲೆಗಳಲ್ಲಿ, 2020-21ನೇ ಸಾಲಿನಲ್ಲಿ 1003 ಕನ್ನಡ ಮಾಧ್ಯಮ ಶಾಲೆಗಳಲ್ಲಿ ಹಾಗೂ 400 ಉರ್ದು ಮಾಧ್ಯಮ ಶಾಲೆಗಳಲ್ಲಿ ದ್ವಿ-ಭಾಷಾ ಮಾಧ್ಯಮವನ್ನು ಪ್ರಾರಂಭಿಸಿದ್ದು, ಪ್ರಸ್ತುತ ಒಟ್ಟು 2404 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ದ್ವಿ-ಭಾಷಾ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ).<br><br>ದ್ವಿ ಭಾಷಾ ವಿಭಾಗವನ್ನು ಮಂಜೂರು ಮಾಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.<br><br>1. ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಕನಿಷ್ಠ 4 ಶಾಲೆಗಳನ್ನು ಮಂಜೂರು ಮಾಡುವುದು. ಇವುಗಳಲ್ಲಿ ಒಂದಾದರೂ ಶಾಲೆ ವಿಧಾನ ಸಭಾ ಕ್ಷೇತ್ರ ಕೇಂದ್ರದ ಪ್ರಮುಖ ಸ್ಥಾನಗಳಲ್ಲಿ ಇರುವುದು.<br><br>2. ಒಂದೇ ಆವರಣದಲ್ಲಿ 1 ರಿಂದ 10ನೇ ತರಗತಿಗಳು ನಡೆಯುವ ಶಾಲೆಗಳಿಗೆ ಪ್ರಥಮ ಆದ್ಯತೆ.<br><br>3. ಆ ಸಾಲಿನಲ್ಲಿ 1ನೇ ತರಗತಿಗೆ ಮಾತ್ರ ಮಂಜೂರು ಮಾಡಿ, ಮುಂದಿನ ಸಾಲುಗಳಲ್ಲಿ ಕ್ರಮೇಣ ಮುಂದಿನ ತರಗತಿಗಳಿಗೆ ವಿಸ್ತರಿಸುವುದು.<br><br>4. ಒಂದೇ ಆವರಣದಲ್ಲಿ 1 ರಿಂದ 10ನೇ ತರಗತಿಗಳು ನಡೆಯುವ ಶಾಲೆಗಳು ಲಭ್ಯವಿಲ್ಲದೆ ಇದ್ದಲ್ಲಿ ಮಕ್ಕಳ ದಾಖಲಾತಿ ಹೆಚ್ಚಿರುವ 1 ರಿಂದ 8ನೇ ತರಗತಿ ನಡೆಯುವ ಶಾಲೆಗಳಿಂದ 100 ಮೀ ಇಂದ 500 ಮೀ ವ್ಯಾಪ್ತಿಯೊಳಗಿರುವ ಪ್ರೌಢ ಶಾಲೆಗಳಿದ್ದಲ್ಲಿ, ಅಂತಹ ಶಾಲೆಗಳನ್ನು ಆಯ್ಕೆ ಮಾಡುವುದು. |

**ಪೂರ್ವಪ್ರಾಥಮಿಕ ಶಾಲೆ (ನರ್ಸರಿ)**

2024–25ನೇ ಸಾಲಿಗೆ ಜಿಲ್ಲೆಗಳಿಂದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ವಿಭಾಗವನ್ನು ಪ್ರಾರಂಭಿಸಲು ಒಟ್ಟು 332 ಪ್ರಸ್ತಾವನೆಗಳನ್ನು ಸ್ವೀಕರಿಸಿ 2024–25ನೇ ಸಾಲಿನ ಯೋಜನಾ ಅನುಮೋದನಾ ಮಂಡಳಿ (ಪಿ.ಎ.ಬಿ)ಯಲ್ಲಿ ಮಂಡಿಸಲಾಗಿದ್ದು, ಪರಿಶೀಲನಾ ಹಂತದಲ್ಲಿದೆ.

**ಸರ್ಕಾರಿ ಪ್ರೌಢಶಾಲೆ:–**

- 2021–22ನೇ ಸಾಲಿನಲ್ಲಿ 14 ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ತೆರೆಯಲು ಅನುಮತಿ ನೀಡಿದೆ.

ದಾವಣಗೆರೆ–01, ಹಾಸನ–01 ಬೆಂಗಳೂರು ಉತ್ತರವಲಯ–02, ಬೆಂಗಳೂರು ಗ್ರಾಮಾಂತರ ಜಿಲ್ಲೆ–01 ತುಮಕೂರು ಜಿಲ್ಲೆ–01 ಬೆಂಗಳೂರು ದಕ್ಷಿಣ ವಲಯ–01, ಚಿಕ್ಕಬಳ್ಳಾಪುರ–02, ದ.ಕನ್ನಡ–01, ಶಿವಮೊಗ್ಗ–1, ಮಧುಗಿರಿ ಶೈಕ್ಷಣಿಕ ಜಿಲ್ಲೆ–1, ಕೋಲಾರ–2

- 2022–23ನೇ ಸಾಲಿನಲ್ಲಿ 02 ಸರ್ಕಾರಿ ಪ್ರೌಢಶಾಲೆಗಳಿಗೆ ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ತೆರೆಯಲು ಅನುಮತಿ ನೀಡಿದೆ.
  ಬೆಂಗಳೂರು ಗ್ರಾಮಾಂತರ–1
  ದಕ್ಷಿಣ ಕನ್ನಡ –1
- 2023–24ನೇ ಸಾಲಿನಲ್ಲಿ ಒಟ್ಟು ಈ ಕೆಳಕಂಡ ಜಿಲ್ಲೆಗಳ 05 ಸರ್ಕಾರಿ ಪ್ರೌಢಶಾಲೆಗಳಿಗೆ 01 ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ತೆರೆಯಲು ಅನುಮತಿ ನೀಡಿದೆ.
  ಶಿವಮೊಗ್ಗ, ಶಿರಸಿ ಶೈಕ್ಷಣಿಕ ಜಿಲ್ಲೆ, ಹಾಸನ, ಉಡುಪಿ, ಮಂಡ್ಯ.

**ಮಾನದಂಡಗಳು:–**

1.ಸರ್ಕಾರಿ ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ಆಂಗ್ಲ ಮಾಧ್ಯಮ ವಿಭಾಗ ಅನುಮತಿ ನೀಡಲು ಸ್ಥಳೀಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿದ್ದರೆ ಅಂತಹ ಕಡೆ ಇರುವ ಸರ್ಕಾರಿ ಪ್ರೌಢಶಾಲೆಗಳಲ್ಲಿ ಆಂಗ್ಲ ಮಾಧ್ಯಮ ಹೆಚ್ಚುವರಿ ವಿಭಾಗ ತೆರೆಯಲು ಅನುಮತಿ ನೀಡಲಾಗುತ್ತದೆ.

| | | |
|---|---|---|
| | | 2.ಆಂಗ್ಲ ಮಾಧ್ಯಮ ಅನುಮತಿ ನೀಡಲು ಸದರಿ ಶಾಲೆಯಲ್ಲಿ ಹತ್ತಿರದ ಶಾಲೆಗಳಿಂದ ಮುಂದಿನ ವರ್ಷಗಳಲ್ಲಿಯೂ ನಿಯಮಿತ ಸಂಖ್ಯೆಯ ಮಕ್ಕಳು ದಾಖಲಾಗುವ ಸಾಧ್ಯತೆ ಇರಬೇಕು.<br><br>3 ಆಂಗ್ಲ ಮಾಧ್ಯಮ ಅನುಮತಿ ಕೋರಿದ ಶಾಲೆಯ ಹತ್ತಿರದಲ್ಲಿ ಇರುವ ಸರ್ಕಾರಿ ಪ್ರೌಢಶಾಲೆಯಲ್ಲಿ ಆಂಗ್ಲ ಮಾಧ್ಯಮ ಇದ್ದಲ್ಲಿ ಸದರಿ ಶಾಲೆಗೆ ಆಂಗ್ಲ ಮಾಧ್ಯಮ ಅನುಮತಿ ನೀಡಲು ಅವಕಾಶವಿರುವುದಿಲ್ಲ. |
| ಆ) | ಸರಕಾರಿ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸಿದ ಕಡೆ ಅಗತ್ಯ ತರಬೇತಿ ಹೊಂದಿದ ಶಿಕ್ಷಕರು, ಪೂರಕ ವ್ಯವಸ್ಥೆಗಳು ಇವೆಯೇ; ಹಾಗೆಯೇ ಸಣ್ಣ ತರಗತಿಗಳನ್ನು ಇಂಗ್ಲೀಷ್ ಮಾಧ್ಯಮದಲ್ಲಿ ಪ್ರಾರಂಭಿಸಿ ಮುಂದಿನ ತರಗತಿಗಳಲ್ಲಿ ಅಂದರೆ ಪ್ರೌಢ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮ ಕಲಿಸಲು ಅಗತ್ಯ ವ್ಯವಸ್ಥೆಯಿರದೆ ಶಾಲಾ ಮಕ್ಕಳಿಗೆ ತೊಂದರೆಯಾಗಿರುವ ಪ್ರಕರಣಗಳಿವೆಯೇ; ಈ ಬಗ್ಗೆ ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಮಕ್ಕಳ ಕಲಿಕೆಯನ್ನು ಉತ್ತಮಪಡಿಸುವ ಸದುದ್ದೇಶದಿಂದ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಬೋಧಿಸುತ್ತಿರುವ ಶಿಕ್ಷಕರುಗಳಿಗೆ EMTIP (English Medium Teachers Induction Program) 2019–20 ಸಾಲಿನಿಂದ 2022–23ನೇ ಸಾಲಿನವರೆಗೆ ಒಟ್ಟು 15,166 ಶಿಕ್ಷಕರಿಗೆ ತರಬೇತಿಯನ್ನು ನೀಡಲಾಗಿದೆ. ಸದರಿ ಸಾಲಿನಲ್ಲಿ 8,647 ಶಿಕ್ಷಕರಿಗೆ ತರಬೇತಿಯನ್ನು ಪೂರ್ಣಗೊಳಿಸಲಾಗಿದೆ.<br><br>2023–24ನೇ ಸಾಲಿನವರೆಗೆ 1 ರಿಂದ 5 ನೇ ತರಗತಿಗಳಲ್ಲಿ ಆಂಗ್ಲ ಮಾಧ್ಯಮ ದ್ವಿಭಾಷಾ (Bilingual) ಶಾಲೆಗಳನ್ನು ಪ್ರಾರಂಭಿಸಲಾಗಿದೆ. 2024–25ನೇ ಸಾಲಿನಲ್ಲಿ 6ನೇ ತರಗತಿಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಪ್ರಾರಂಭಿಸುವ ಕುರಿತು ಆದೇಶಿಸಲಾಗಿದೆ. ಮುಂದಿನ ವರ್ಷದಲ್ಲಿ 1000 ಶಾಲೆಗಳಲ್ಲಿ 6ನೇ ತರಗತಿಗೆ ಆಂಗ್ಲ ಮಾಧ್ಯಮ ತರಗತಿಗಳನ್ನು ಆರಂಭಿಸಲಾಗುತ್ತಿದೆ. ಹಾಗೂ ಆಂಗ್ಲ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರಿಗೆ ವಿಷಯವಾರು ಇಂಗ್ಲಿಷ್, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ತರಬೇತಿಗಳನ್ನು ಆಯೋಜಿಸಲಾಗುವುದು. |
| ಇ) | ಸರಕಾರಿ ಶಾಲೆಗಳ ಕನ್ನಡ ಹಾಗೂ ಇಂಗ್ಲೀಷ್ ಮಾಧ್ಯಮ ಪಠ್ಯಪುಸ್ತಕಗಳಲ್ಲಿ ಪಾಠಗಳ ಸಂಖ್ಯೆಯನ್ನು ಮಕ್ಕಳ ಸಾಮರ್ಥ್ಯಕ್ಕನುಸಾರವಾಗಿ ಬದಲಾಯಿಸುವ, ಸರಳೀಕರಿಸುವ ಹಾಗೂ ಪಠ್ಯಪುಸ್ತಕಗಳಲ್ಲಿ ಸುಧಾರಣೆ ಮಾಡುವ ಬಗ್ಗೆ ಪಠ್ಯ ಪುಸ್ತಕ ಸಮಿತಿಯನ್ನು ಪರಿಷ್ಕರಿಸಲು ಸರ್ಕಾರ ಕ್ರಮವಹಿಸಲಾಗುವುದೇ; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಇಪಿ 270 ಪಿಎಂಸಿ 2023, ದಿನಾಂಕ: 25.09.2023 ರಲ್ಲಿ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಯನ್ನು ರಚಿಸಲಾಗಿದ್ದು, 2024–25 ನೇ ಸಾಲಿಗೆ ಜಾರಿಗೆ ಬರುವ 01 ರಿಂದ 10 ನೇ ತರಗತಿಯ ಕನ್ನಡ ಪ್ರಥಮ ಮತ್ತು ದ್ವಿತೀಯ ಭಾಷೆ ಹಾಗೂ 09 ಮತ್ತು 10 ನೇ ತರಗತಿಯ ಕನ್ನಡ ತೃತೀಯ ಭಾಷೆ, 06 ರಿಂದ 10 ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡಲು ಸಮಿತಿಯನ್ನು ರಚಿಸಲಾಗಿದೆ. ವರದಿ ಸ್ವೀಕೃತವಾಗಿರುವುದಿಲ್ಲ. |

| | | |
|---|---|---|
| ಈ) | ಸರಕಾರಿ ಶಾಲೆಗಳ ಇಂಗ್ಲೀಷ್ ಮಾಧ್ಯಮ ತರಗತಿಗಳಿಗೆ ಖಾಸಗಿ ಶಾಲೆಗಳಿಗೆ ಹೋಗಲು ಸಾಧ್ಯವಿರದ ಮತ್ತು ಗ್ರಾಮೀಣ ಭಾಗದ ಬಡ ಮತ್ತು ಮಧ್ಯಮ ವರ್ಗದ ಮಕ್ಕಳು ಬರುತ್ತಿದ್ದು, ಈ ಶಾಲೆಗಳ ಗುಣಮಟ್ಟವನ್ನು ಎತ್ತರಿಸಲು ಸರ್ಕಾರದ ಕ್ರಮಗಳೇನು; (ವಿವರ ನೀಡುವುದು) | ಉಪ ಪ್ರಶ್ನೆ – ಆ ರಲ್ಲಿ ವಿವರಿಸಿರುವಂತೆ, ಆಂಗ್ಲ ಮಾಧ್ಯಮದಲ್ಲಿ ಬೋಧಿಸುವ ಶಿಕ್ಷಕರಿಗೆ ತರಬೇತಿಗಳನ್ನು ನೀಡಲಾಗುತ್ತಿದೆ. ಇದರಿಂದ ವಿದ್ಯಾರ್ಥಿಗಳ ಕಲಿಕಾ ಮಟ್ಟ ಉತ್ತಮಗೊಳ್ಳಲು ಸಾಧ್ಯವಾಗುತ್ತದೆ. |
| ಉ) | ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರಿ–ಖಾಸಗಿ ಶಾಲೆಗಳು, ಸರ್ಕಾರಿ ಇಂಗ್ಲೀಷ್ ಮಾಧ್ಯಮ–ಖಾಸಗಿ ಇಂಗ್ಲೀಷ್ ಮಾಧ್ಯಮ, ರಾಜ್ಯ ಪಠ್ಯಕ್ರಮ–ರಾಷ್ಟ್ರೀಯ ಪಠ್ಯಕ್ರಮ ಇತ್ಯಾದಿಗಳು ವರ್ಗ ಭೇದವನ್ನು ಸೃಷ್ಟಿಸುವಂತಿದ್ದು, ಇವೆಲ್ಲಾ ರೀತಿಯ ಶಿಕ್ಷಣ ಕ್ರಮಗಳ ಗುಣಮಟ್ಟವನ್ನು ಏಕರೀತಿಯಾಗಿ ಮಾಡಲು ಸರ್ಕಾರ ಚಿಂತಿಸಿದೆಯೇ? (ವಿವರ ನೀಡುವುದು) | ಇಲ್ಲ. |

ಸಂಖ್ಯೆ: ಇಪಿ 03 ಪಿಎಂಎ 2024

**(ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.

ಅನುಬಂಧ - 01

# SAMAGRA SHIKSHANA KARNATAKA

## Details of Bilingual Sections

| SL NO | DISTRICT_NAME | English - Kannada Bilingual Schools 2019-20 | English - Kannada Bilingual Schools 2020-21 | English - Urdu Bilingual Schools 202-21 | Total |
|---|---|---|---|---|---|
| 1 | Bagalkot | 28 | 21 | 17 | 66 |
| 2 | Ballari | 43 | 23 | 15 | 81 |
| 3 | Belagavi | 35 | 23 | 16 | 74 |
| 4 | Belagavi Chikkodi | 39 | 30 | 19 | 88 |
| 5 | Bengaluru Rural | 16 | 24 | 11 | 51 |
| 6 | Bengaluru U South | 58 | 13 | 15 | 86 |
| 7 | Bengaluru U North | 70 | 17 | 15 | 102 |
| 8 | Bidar | 26 | 28 | 15 | 69 |
| 9 | Chamarajanagara | 17 | 34 | 5 | 56 |
| 10 | Chikkaballapura | 20 | 39 | 11 | 70 |
| 11 | Chikkamangaluru | 21 | 38 | 6 | 65 |
| 12 | Chitradurga | 23 | 46 | 12 | 81 |
| 13 | Dakshina Kannada | 49 | 34 | 0 | 83 |
| 14 | Davanagere | 31 | 20 | 14 | 65 |
| 15 | Dharwad | 28 | 18 | 19 | 65 |
| 16 | Gadag | 17 | 6 | 14 | 37 |
| 17 | Hassan | 38 | 46 | 6 | 90 |
| 18 | Haveri | 25 | 27 | 20 | 72 |
| 19 | Kalburgi | 39 | 40 | 23 | 102 |
| 20 | Kodagu | 8 | 14 | 0 | 22 |
| 21 | Kolar | 24 | 47 | 13 | 84 |
| 22 | Koppal | 20 | 20 | 10 | 50 |
| 23 | Mandya | 32 | 43 | 9 | 84 |
| 24 | Mysuru | 46 | 31 | 12 | 89 |
| 25 | Raichur | 33 | 30 | 14 | 77 |
| 26 | Ramanagara | 24 | 23 | 11 | 58 |
| 27 | Shivamogga | 30 | 56 | 16 | 102 |
| 28 | Tumakuru | 31 | 41 | 9 | 81 |
| 29 | Tumakuru Madhugiri | 18 | 28 | 4 | 50 |

| | | | | | |
|---|---|---|---|---|---|
| 30 | Udupi | 24 | 20 | 0 | 44 |
| 31 | Uttara Kannada | 14 | 23 | 10 | 47 |
| 32 | Uttara Kannada Sirsi | 13 | 31 | 10 | 54 |
| 33 | Vijayapura | 38 | 36 | 20 | 94 |
| 34 | Yadagiri | 23 | 33 | 9 | 65 |
| **TOTAL** | | **1001** | **1003** | **400** | **2404** |

ನಿರ್ದೇಶಕರು(ಗುಣಮಟ್ಟ)
ಸಮಗ್ರ ಶಿಕ್ಷಣ– ಕರ್ನಾಟಕ